ಜಿಲ್ಲಾಧಿಕಾರಿಗಳ ಕಛೇರಿ
ಹಾಸನ ಜಿಲ್ಲೆ, ಹಾಸನ
14 AUG 2009

# ಕರ್ನಾಟಕ ಸರ್ಕಾರ

ಆಯುಕ್ತರ ಕಚೇರಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು-560 001.
ದೂರವಾಣಿ: 91-080-22212408
ಫ್ಯಾಕ್ಸ್: 91-080-22277528

ನಂ: ತಾಂ.ಪ.ಭೂ.ಘಟಕ.54/2008-09 ದಿನಾಂಕ 4.8.2009.

## ಸುತ್ತೋಲೆ

ವಿಷಯ: 11ಇ ನಕ್ಷೆ ತಯಾರಿಸಲು ಪರವಾನಗಿ ಭೂಮಾಪಕರು ಸ್ಥಳಕ್ಕೆ ಭೇಟಿ ನೀಡುವುದು ಕಡ್ಡಾಯವಾಗಿದ್ದು, ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಈ ಕಾರ್ಯಾಲಯದ ಸುತ್ತೋಲೆಯ ಸಮಸಂಖ್ಯೆ ದಿನಾಂಕ 17.10.2008 ಹಾಗೂ 16.12.2008.

★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪರವಾನಗಿ ಭೂಮಾಪಕರ ಯೋಜನೆಯಡಿಯಲ್ಲಿ ಪರವಾನಗಿ ಭೂಮಾಪಕರು 11ಇ ನಕ್ಷೆ ತಯಾರಿಸುವ ಸಂದರ್ಭದಲ್ಲಿ ಅಳತೆ ಸಮಯದಲ್ಲಿ ಸ್ಥಳಕ್ಕೆ ಭೇಟಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದ್ದು, ಈ ಕುರಿತು ಉಲ್ಲೇಖದನ್ವಯದ ಸುತ್ತೋಲೆಯಲ್ಲಿ ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಆದರೆ ಸುತ್ತೋಲೆಯಲ್ಲಿನ ಒಂದು ಅಂಶವಾದ ಪರವಾನಗಿ ಭೂಮಾಪಕರು ಅಳತೆಗೆ ಭೇಟಿ ನೀಡುವ ಗ್ರಾಮದಲ್ಲಿ ಆ ಗ್ರಾಮದ ನಾಮಫಲಕ ಇರುವ ಸಾರ್ವಜನಿಕ ಕಟ್ಟಡ ಅಂದರೆ ಶಾಲೆ / ಗ್ರಾಮ ಪಂಚಾಯಿತಿ / ಆಸ್ಪತ್ರೆ / ಅಂಗನವಾಡಿ ಅಥವಾ ಇನ್ಯಾವುದೇ ಕಟ್ಟಡದ ಮುಂಭಾಗದಲ್ಲಿ ಮಾರಾಟ ಮಾಡುವ ಹಾಗೂ ಕೊಳ್ಳುವ ವ್ಯಕ್ತಿಗಳೊಂದಿಗೆ ಮೊಬೈಲ್ ಫೋನ್‌ಗಳಲ್ಲಿರುವ ಕ್ಯಾಮರಾಗಳ ಮೂಲಕ ಭಾವಚಿತ್ರವನ್ನು ಕಡ್ಡಾಯವಾಗಿ ತೆಗೆದು ಅದನ್ನು 11ಇ ನಕ್ಷೆಯೊಂದಿಗೆ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು ಹಾಗೂ ಭಾವಚಿತ್ರದ ಸಾಫ್ಟ್ ಕಾಪಿಯನ್ನು ಮೋಜಿಣಿ ತಂತ್ರಾಂಶಕ್ಕೆ ಅಳವಡಿಸುವ ಸಲುವಾಗಿ ಕಛೇರಿಗೆ ನೀಡುವಂತೆ ಹಾಗೂ ಅಲ್ಲಿಯವರೆಗೂ ಭಾವಚಿತ್ರದ ಪ್ರತಿಯನ್ನು ಒದಗಿಸುವಂತೆ ಸೂಚಿಸಲಾಗಿತ್ತು.

ಆದರೆ ಈ ಬಗ್ಗೆ ಪರವಾನಗಿ ಭೂಮಾಪಕರ ಸಂಘದ ಪದಾಧಿಕಾರಿಗಳು ಮತ್ತು ಹಲವಾರು ಸಾರ್ವಜನಿಕರಿಂದ ಸ್ವೀಕೃತವಾದ ಮನವಿಗಳಲ್ಲಿ ಭಾವಚಿತ್ರದ ಪ್ರತಿಯನ್ನು ನಕ್ಷೆಯೊಂದಿಗೆ ಹಾಜರುಪಡಿಸುವುದನ್ನು ಪುನರ್ ಪರಿಶೀಲಿಸುವಂತೆ ಕೋರಿರುತ್ತಾರೆ. ಈ ಅಂಶವನ್ನು ಪರಿಶೀಲಿಸಲಾಗಿದೆ. ಇನ್ನು ಮುಂದೆ ಈ ಮೇಲೆ ವಿವರಿಸಿದಂತೆ, ಭಾವಚಿತ್ರವನ್ನು ಮೊಬೈಲ್ ಫೋನ್‌ಗಳಲ್ಲಿನ ಕ್ಯಾಮೆರಾಗಳ ಮೂಲಕ ಭಾವಚಿತ್ರ ತೆಗೆದಿರುವ ಬಗ್ಗೆ ಮೊಬೈಲ್‌ಗಳಲ್ಲಿಯೇ ಕಛೇರಿಯಲ್ಲಿನ ಸಂಬಂಧಪಟ್ಟ ಪರ್ಯಾವೇಕ್ಷಕರಿಗೆ ತೋರಿಸುವುದು. ಯಾವುದೇ ಕಾರಣಕ್ಕೂ ಪರ್ಯಾವೇಕ್ಷಕರುಗಳು ಪರವಾನಗಿ ಭೂಮಾಪಕರಿಗೆ ಭಾವಚಿತ್ರದ ಪ್ರತಿಯನ್ನು 11ಇ ನಕ್ಷೆಯೊಂದಿಗೆ ಲಗತ್ತಿಡುವಂತೆ ಒತ್ತಾಯಿಸತಕ್ಕದ್ದಲ್ಲವೆಂದು ಈ ಮೂಲಕ ಸೂಚಿಸಿದೆ. ಈ ಬಗ್ಗೆ ಪರವಾನಗಿ ಭೂಮಾಪಕರುಗಳಿಗೆ ಅನಾವಶ್ಯಕ ತೊಂದರೆ ನೀಡಿರುವುದು ಕಂಡುಬಂದಲ್ಲಿ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗುವುದು.

ಆಯುಕ್ತರು, 4/8
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

20-8-09

sslr-8Technical-1
8

ತಾ
ಸುತ್ತೋಲೆ ಗೆ

652